ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ - 19

4ನೇ ವರ್ಷ 32ನೇ ಸಂಚಿಕೆ ಕೊಪ್ಪ 13-4-1986 ಭಾನುವಾರ ಬೆಲೆ 40 ಪೈಸೆ

ಸರ್ಕಲ್ ಇನ್ಸ್‌ಪೆಕ್ಟರ್, ಎಸ್.ಐ. ಅಮಾನತು; ಕೊಪ್ಪ ಠಾಣೆಗೆ ಹೊಸ ಎಸ್.ಐ. ನೇಮಕ

ಕೊಪ್ಪ: ಕಳೆದ ವಾರ ಇಲ್ಲಿನ ಪೋಲೀಸ್ ಠಾಣೆಯ ಸರ್ಕಲ್ ಇನ್‌ಸ್ಪೆಕ್ಟರ್ ಮಂಡಲ್ಕರ್ ಮತ್ತು ಸಬ್ ಇನ್‌ಸ್ಪೆಕ್ಟರ್ ಟಿ.ಡಿ.ದುರ್ಗಯ್ಯ ಅವರುಗಳು ಸಾರ್ವಜನಿಕವಾಗಿ ಕೈ ಕೈ ಮಿಲಾಯಿಸಿಕೊಂಡ ಬಗ್ಗೆ ಇಬ್ಬರನ್ನೂ ಎಸ್ಪಿಯವರು ಅಮಾನತಿನಲ್ಲಿ ಇಟ್ಟಿದ್ದಾರೆ.

ಚಿಕ್ಕಮಗಳೂರು ಪೋಲೀಸ್ ಗುಪ್ತಚರ ವಿಭಾಗದಲ್ಲಿದ್ದ ಟಿ. ಆರ್. ಮಂಜುನಾಥಯ್ಯ ಅವರು ಕೊಪ್ಪದ ಹೊಸ ಠಾಣಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

ನ. ರಾ. ಪುರ ಠಾಣಾಧಿಕಾರಿ ಬಿ. ಜೆ. ಭಂಡಾರಿ ತಾತ್ಕಾಲಿಕವಾಗಿ ಸರ್ಕಲ್ ಇನ್‌ಸ್ಪೆಕ್ಟರ್ ಹುದ್ದೆಯನ್ನು ನೋಡಿಕೊಳ್ಳಲಿದ್ದು ಸೂರ್ಯದೇವಸ್ಥಾನದ ಶೀನಶೆಟ್ಟರ ಕೊಲೆ ಪ್ರಕರಣದ ತನಿಖೆಯನ್ನು ಅವರೇ ಮುಂದುವರಿಸಲಿದ್ದಾರೆಂದು ತಿಳಿದುಬಂದಿದೆ.

ಹೊಳೆಯಲ್ಲಿ ಮುಳುಗಿ ಸಾವು

ಹರಿಹರಪುರ: ಚಿಕ್ಕಮಗಳೂರಲ್ಲಿ ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿಯಾಗಿದ್ದ ಬಾಳಿಗ ಎಂಬವರು ಈಚೆಗೆ ಹರಿಹರಪುರ ಹೊಳೆಯಲ್ಲಿ ಸ್ನಾನಕ್ಕೆಂದು ಹೋಗಿದ್ದವರು ಮುಳುಗಿ ಸಾವನ್ನಪ್ಪಿದ್ದಾರೆ.

ಸ್ನಾನಘಟ್ಟದಿಂದ ಒಂದೆರಡು ಕಿ. ಮೀ. ಕೆಳಭಾಗದಲ್ಲಿ ಒಬ್ಬರೇ ಈಜಾಡಲು ಹೋಗಿದ್ದಾಗ ಈ ದುರ್ಘಟನೆ ನಡೆದಿದೆ.

ಸಕಲೇಶಪುರ ಏಲಕ್ಕಿ ಧಾರಣೆ

ವ್ಯಾಪಾರದ ತಾರೀಖು	ಗರಿಷ್ಠ ಧಾರಣೆ	ಸರಾಸರಿ ಧಾರಣೆ
26.3.86	177	94
27.3.86	171	86
28.3.86	183	100

ಶಿವಮೊಗ್ಗ ಅಡಿಕೆ ಪೇಟೆ

ತಾರೀಕು: 11.4.86

ಸರಕು : 2820–3070

ಬೆಟ್ಟೆ : 1809–2060

ಗೊರಬಲು : 1100–1600

ಕಾಳು ಮೆಣಸು: 3800. (1.4 1986)

ಜಿಲ್ಲೆ, ತಾಲ್ಲೂಕುಗಳ ಪುನರ್ವಿಂಗಡಣೆ ಬಗ್ಗೆ ಹುಂಡೇಕರ್ ಸಮಿತಿ ಅಭಿಪ್ರಾಯ ಸಂಗ್ರಹ

ಚಿಕ್ಕಮಗಳೂರು: ಜಿಲ್ಲೆಗಳ ಮತ್ತು ತಾಲ್ಲೂಕುಗಳ ಪುನರ್‌ವಿಂಗಡಣೆ ಬಗ್ಗೆ ಹುಂಡೇಕರ್ ಸಮಿತಿ ಜಿಲ್ಲೆಯ ಸಾರ್ವಜನಿಕರು, ಶಾಸಕರು ಹಾಗೂ ಅಧಿಕಾರಿಗಳ ಅಭಿಪ್ರಾಯವನ್ನು ಈಚೆಗೆ ಸಂಗ್ರಹಿಸಿತು.

ವಾಸುದೇವರಾವ್ ಸಮಿತಿಯು ನರಸಿಂಹರಾಜಪುರ ತಾಲ್ಲೂಕು ಚಿಕ್ಕದಾಗಿರುವುದರಿಂದ ಅದನ್ನು ತೆಗೆದುಹಾಕುವುದು ಮತ್ತು ತರೀಕೆರೆ ಉಪ ವಿಭಾಗವನ್ನು ಕಡೂರಿಗೆ ವರ್ಗಾಯಿಸುವ ಬಗ್ಗೆ ಸಲಹೆ ನೀಡಿದೆ. ಬಾಳೆಹೊನ್ನೂರನ್ನು ಪ್ರತ್ಯೇಕ ತಾಲ್ಲೂಕು ಕೇಂದ್ರವನ್ನಾಗಿ ಮಾಡಲು ಸ್ಥಳೀಯ ಮುಖಂಡರು ಒತ್ತಾಯಿಸಿದ್ದಾರೆಂದು ಸಮಿತಿ ಅಧ್ಯಕ್ಷ ಹುಂಡೇಕರ್‌ರವರು ತಿಳಿಸಿದರು.

ಲಕ್ಕವಳ್ಳಿ ಹೋಬಳಿಯನ್ನು ಶಿವಮೊಗ್ಗ ಜಿಲ್ಲೆಗೆ ಸೇರಿಸುವ ಬಗ್ಗೆ ಹಾಗೂ ಅಜ್ಜಂಪುರವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವ ಬಗ್ಗೆ ಅಲ್ಲಿನ ಮುಖಂಡರು ಸಮಿತಿಯನ್ನು ಒತ್ತಾಯಿಸಿದರು.

ಆಡಳಿತಾತ್ಮಕ ಹಾಗೂ ಭೌಗೋಳಿಕ ದೃಷ್ಟಿಯಿಂದ ಕಳಸ ಹಾಗೂ ಅಜ್ಜಂಪುರವನ್ನು ತಾಲ್ಲೂಕು ಕೇಂದ್ರಗಳನ್ನಾಗಿಯೂ, ತರೀಕೆರೆ ಮತ್ತು ಚಿಕ್ಕಮಗಳೂರು ಉಪ ವಿಭಾಗದ ಜೊತೆಗೆ ಕೊಪ್ಪವನ್ನು ಉಪ ವಿಭಾಗವನ್ನಾಗಿಯೂ ಮಾಡುವುದು ಅಗತ್ಯವಾಗಿದೆ ಎಂದು ಜಿಲ್ಲಾಧಿಕಾರಿ ಬಿ. ಪಾರ್ಥಸಾರಥಿ ತಮ್ಮ ಅಭಿಪ್ರಾಯ ಸೂಚಿಸಿದರು.

ಚಂದಾ ಹಣ ಕಳಿಸಿ

ಸಹಕರಿಸಿ

ವಾರ್ಷಿಕ ಚಂದಾ 20 ರೂ.

ಎಸ್ಪಿ ಪಾವಟೆ ಅವರಿಗೆ ಡಿ.ಐ.ಜಿ. ಆಗಿ ಬಡ್ತಿ

ಚಿಕ್ಕಮಗಳೂರು: ಕಳೆದ ಸುಮಾರು ಎರಡೂವರೆ ವರ್ಷದಿಂದ ಜಿಲ್ಲೆಯ ಪೋಲೀಸ್ ಮುಖ್ಯಾಧಿಕಾರಿಯಾಗಿದ್ದ ಎಸ್. ಎಸ್. ಪಾವಟೆ ಅವರಿಗೆ ಡಿ.ಐ.ಜಿ. ಆಗಿ ಬಡ್ತಿ ದೊರೆತಿದ್ದು, ಬೆಳಗಾವಿಯಲ್ಲಿ ಅವರು ತಮ್ಮ ಹೊಸ ಹುದ್ದೆಯನ್ನು ಏ. 12ರಂದು ವಹಿಸಿಕೊಂಡಿದ್ದಾರೆ.

ಅವರ ಸ್ಥಾನಕ್ಕೆ ಬೆಂಗಳೂರಿನ ಅಗ್ನಿ ಶಾಮಕ ದಳದ ಉಪ ನಿರ್ದೇಶಕರಾಗಿದ್ದ ಮಹಾಪಾತ್ರ ಎಂಬುವರು ನೇಮಕವಾಗಿದ್ದು ಅವರು ಏ. 15ರಂದು ಅಧಿಕಾರ ವಹಿಸಿಕೊಳ್ಳುವ ನಿರೀಕ್ಷೆಯಿದೆಯೆನ್ನಲಾಗಿದೆ.

"ಅಧ್ಯಾಪಕ ವೃತ್ತಿ ಪವಿತ್ರ"

(ನಮ್ಮ ಪ್ರತಿನಿಧಿಯಿಂದ)

ಶೃಂಗೇರಿ: ಭಾವೀ ಸಮಾಜದ ನಿರ್ಮಾತೃಗಳಾದ ಅಧ್ಯಾಪಕರ ವೃತ್ತಿ ಬಹಳ ಪವಿತ್ರವಾದುದು. ಹಿಂದೆ ಎಲ್ಲೂ ಯಾವ ಸರ್ಕಾರಿ ಕೆಲಸವೂ ಸಿಕ್ಕದವರು ಅಧ್ಯಾಪಕ ವೃತ್ತಿಗೆ ಅರ್ಜಿ ಹಾಕುವ ರೂಢಿ ಇತ್ತು. ಅದು ಹಾಗಾಗಬಾರದು. ಅಧ್ಯಾಪಕರು ಈ ವೃತ್ತಿಗಾಗಿ ತಮ್ಮ ಸೇವೆಯನ್ನು ಅರ್ಪಿಸಿಕೊಳ್ಳುವವರಾಗಬೇಕು ಎಂದು ಗೋವಿಂದ ಗೌಡರು ಇಲ್ಲಿ ಹೇಳಿದರು.

ಏ. 4ರಂದು ಇಲ್ಲಿ ಕಚ್ಚೋಡಿ ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ನಡೆದ ತಾ|| ಶಾಲಾಭಿವೃದ್ಧಿ ಸಮಿತಿಗಳ ಮತ್ತು ಶಿಕ್ಷಕರ ಸಮ್ಮೇಳನದಲ್ಲಿ ಮಾತಾಡುತ್ತಿದ್ದ ಅವರು 1945ರಲ್ಲಿ ತಾವೂ ಶಿಕ್ಷಕರಾಗಿದ್ದುದನ್ನು ಜ್ಞಾಪಿಸಿಕೊಂಡರು.

ಸ್ವಾತಂತ್ರ್ಯ ಬಂದು 4 ದಶಕದ ಹತ್ತಿರವಾದರೂ ಇನ್ನೂ ಕೇವಲ ಶೇ. 38ರಷ್ಟು ಮಾತ್ರ ಸಾಕ್ಷರತೆ ಸಾಧ್ಯವಾಗಿದ್ದು, ಅದರಲ್ಲೂ ದೇಶದ ಶೇ. 75 ಜನಸಂಖ್ಯೆಯಿರುವ ಹಳ್ಳಿಗಳಲ್ಲಿ ಇದು ಕೇವಲ ಶೇ. 10–12 ಮಾತ್ರ ಇದೆ. ನೊಂದ–ಬೆಂದ ಹಳ್ಳಿಯ ಜನರಿಗೆ ವಿದ್ಯೆ ತಲುಪುವವರೆಗೂ ಸಮಾಜದ ಸಂಪೂರ್ಣ ಪ್ರಗತಿ ಅಸಾಧ್ಯ. ಅಲ್ಲಿಯವರೆಗೆ ಸರ್ಕಾರದ ಸೌಲತ್ತುಗಳೆಲ್ಲ ಕೇವಲ ಬುದ್ಧಿವಂತರ ಪಾಲಾಗುತ್ತವೆ ಮತ್ತು ಸೋರಿ ಹೋಗುತ್ತವೆ.

ಹಳ್ಳಿ, ಪಟ್ಟಣ, ಶ್ರೀಮಂತ–ದಲಿತರ ನಡುವೆ ಅಜಗಜಾಂತರ ವ್ಯತ್ಯಾಸ ಇರುವುದು ಸಮಾಜದ ಹಿತದೃಷ್ಟಿಯಿಂದ ತುಂಬಾ ಅಪಾಯಕರ. ಇದನ್ನು ಗಮನದಲ್ಲಿಟ್ಟುಕೊಂಡು ಪ್ರತಿಯೊಂದು ಮಗುವನ್ನೂ ಶಾಲೆಗೆ ಕಳಿಸುವಂತೆ ಪೋಷಕರನ್ನು ಪ್ರೋತ್ಸಾಹಿಸಬೇಕು.

ಪಟ್ಟಣದ ಶಾಲೆಗಳಲ್ಲಿ ಕಡಿಮೆ ವಿದ್ಯಾರ್ಥಿಗಳಿಗೆ ಹೆಚ್ಚು ಅಧ್ಯಾಪಕರಿದ್ದರೆ ಹಳ್ಳಿಯಲ್ಲಿ 7 ತರಗತಿಗಳಿಗೆ ಕೇವಲ ಒಬ್ಬಿಬ್ಬರು ಅಧ್ಯಾಪಕರಿರುವ ವಿಪರ್ಯಾಸವನ್ನು ಹೋಗಲಾಡಿಸಲು ಸಾಮೂಹಿಕ ವರ್ಗಾವಣೆಯನ್ನು ಉದ್ದೇಶಿಸಲಾಗಿದೆ ಎಂದು ಸಚಿವರು ಸಮರ್ಥಿಸಿಕೊಂಡರು.

ಪುರಸಭಾಧ್ಯಕ್ಷ ಕೆ. ಆರ್. ಅಣ್ಣಯ್ಯ ಹೆಗ್ಡೆ ಮಾತನಾಡಿದರು.

'ದ್ವಾಕ್ರಾ' ಯೋಜನೆಯಲ್ಲಿ, ದಕ್ಷಿಣ ಭಾರತದಲ್ಲೇ ಪ್ರಪ್ರಥಮವಾದ ಸುಧಾರಿತ ತಳಿ ಹಂದಿ ಸಾಕಣೆ ಕೇಂದ್ರ ಸಡಗರದ ಆರಂಭ

(ವರದಿ: ಕಲ್ಕುಳಿ ವಿಠಲ ಹೆಗ್ಡೆ)

ಶೃಂಗೇರಿ: ದಕ್ಷಿಣ ಭಾರತದಲ್ಲಿಯೇ ಪ್ರಪ್ರಥಮವಾದ ಸುಧಾರಿತ ಹಂದಿ ಸಾಕಣೆಯ ಸಾಮೂಹಿಕ ಕೇಂದ್ರವೊಂದು ಇಲ್ಲಿಗೆ ಸಮೀಪದ ನೆಮ್ಮಾರಿನಲ್ಲಿ ಏ. 4ರಂದು ಆರಂಭವಾಯಿತು

ನೆಮ್ಮಾರಿನ ಹೊಸ್ಕೆರೆಯ 16 ಮಂದಿ ಪರಿಶಿಷ್ಟ ಕುಟುಂಬದ ಮಹಿಳೆಯರಿಗೆ 'ದ್ವಾಕ್ರಾ' ಯೋಜನೆಯಲ್ಲಿ ಶೇ. 4ರ ಬಡ್ಡಿಯ ತಲಾ 4ಸಾವಿರ ರೂ. ಸಾಲ ಹಾಗೂ 2 ಸಾವಿರ ರೂ. ಸಹಾಯ ಧನದೊಂದಿಗೆ ಸ್ಥಾಪಿಸಿಕೊಡಲಾಗಿರುವ ಈ ಕೇಂದ್ರದಲ್ಲಿ ತಲಾ ಮೂರು ಮೂರು ಸುಧಾರಿತ ತಳಿ ಹಂದಿ ಮರಿಗಳನ್ನು ನೀಡಲಾಗಿದೆ. ತಲಾ 2400 ರೂ. ವೆಚ್ಚದಲ್ಲಿ 16 ಪ್ರತ್ಯೇಕ ಶೆಡ್‌ಗಳನ್ನು ಒಂದೇ ಆವರಣದಲ್ಲಿ ನಿರ್ಮಿಸಲಾಗಿದೆ.

ವಿದ್ಯೆಗೆ ಒತ್ತು

ದಲಿತ ತರುಣರ ಸಾಂಪ್ರದಾಯಿಕ ಕೊಂಬು–ಕಹಳೆಗಳ ಸ್ವಾಗತದೊಂದಿಗೆ ಕೇಂದ್ರವನ್ನು ಉದ್ಘಾಟಿಸಿದ ಮಂತ್ರಿ ಗೋವಿಂದ ಗೌಡರು, ಹಿಂದುಳಿದ ವರ್ಗಗಳ ಜನ ವಿದ್ಯಾವಂತರಾಗದೆ ಸರ್ಕಾರದ ಸೌಲಭ್ಯಗಳು ಸರಿಯಾಗಿ ಉಪಯೋಗವಾಗುತ್ತಿಲ್ಲ. ಆದ್ದರಿಂದ ಇವರನ್ನು ವಿದ್ಯೆಗಾಗಿ ಪ್ರೋತ್ಸಾಹಿಸಿ, ಪ್ರತಿಯೊಬ್ಬ ಮಕ್ಕಳನ್ನು ಶಾಲೆಗೆ ಕಳಿಸುವಂತೆ ಮಾಡಬೇಕೆಂದು ಅಧಿಕಾರಿಗಳಿಗೆ ಕರೆ ಕೊಟ್ಟರು.

ಶೃಂಗೇರಿ ತಾಲ್ಲೂಕು ರಾಜ್ಯದಲ್ಲಿಯೇ ಅತಿ ಹೆಚ್ಚು–ಶೇ .55ರಷ್ಟು–ಸಾಕ್ಷರತೆ ಹೊಂದಿದ್ದರೂ ಇಲ್ಲಿನ ಪರಿಶಿಷ್ಟ ಜನಾಂಗಗಳಲ್ಲಿ ಹೆಚ್ಚು ಕಡಿಮೆ ನೂರಕ್ಕೆ ನೂರರಷ್ಟು ಅನಕ್ಷರತೆ ಇರುವಂಥ ವಿಪರ್ಯಾಸವನ್ನು ತೊಡೆಯಬೇಕೆಂದು ಅವರು ಹೇಳಿದರು.

ರಾಜ್ಯಕ್ಕೇ ಮೊದಲ್ಪಂಕ್ತಿ

ಈ ಯೋಜನೆ ಕಾರ್ಯಗತಗೊಳಿಸಲು ಶ್ರಮಿಸಿದ ಶೃಂಗೇರಿ ಕ್ಷೇತ್ರಾಭಿವೃದ್ಧಿ ಅಧಿಕಾರಿ ವೆಂಕಟೇಶ ಪ್ರಸಾದ್ ಮತ್ತು ಅವರ ಸಹೋದ್ಯೋಗಿಗಳನ್ನು ಮುಕ್ತ ಕಂಠದಿಂದ ಅಭಿನಂದಿಸಿದ ಸಚಿವರು, ಈ ಯೋಜನೆ ಚೆನ್ನಾಗಿ ಮುಂದುವರಿಯಲು ಎಲ್ಲಾ ಸಂಬಂಧಪಟ್ಟ ಇಲಾಖೆಗಳವರೂ ಪ್ರಾಮಾಣಿಕವಾಗಿ ಶ್ರಮಿಸಬೇಕೆಂದು ಹೇಳಿ, ಈ ಅಭಿನಂದನಾರ್ಹ ಕೆಲಸ ಇಡೀ ರಾಜ್ಯಕ್ಕೇ ಮಾರ್ಗದರ್ಶಿಯಾಗಿದ್ದು, ತಾನು ಹೋದೆಡೆಯಲ್ಲೆಲ್ಲ ಇಂಥ ಉಪಯುಕ್ತ ಯೋಜನೆಗೆ ಪ್ರೇರಣೆ ನೀಡುವುದಾಗಿ ತಿಳಿಸಿದರು.

ಕೀಳರಿಮೆ ಸಲ್ಲ

ಜಿಲ್ಲಾ ಪಶು ಸಂಗೋಪನಾ ಅಧಿಕಾರಿ ಡಾ|| ಎಸ್.ಪಿ. ಪಾರ್ಶ್ವನಾಥಯ್ಯ, ಹಂದಿ ಸಾಕಣೆ ಬಗ್ಗೆ ಜನರಲ್ಲಿ ಕೀಳರಿಮೆ ಇದೆ. ಆದರೆ ಇದು ಅತ್ಯಂತ ಲಾಭದಾಯಕ ಕೃಷಿ. ತಾನು ತಿಂದ ಅರ್ಧದಷ್ಟು ಮೇವನ್ನು ಮಾಂಸವಾಗಿ ಪರಿವರ್ತಿಸುವ ಏಕೈಕ ಪ್ರಾಣಿ ಹಂದಿಯ ಮಾಂಸ ಆರೋಗ್ಯಕ್ಕೆ ಬಹಳ ಉತ್ತಮ. ಕೇವಲ 6 ತಿಂಗಳಲ್ಲಿ 50 ಕಿಲೋ ಬೆಳೆಯುವ (ಕಿಲೋಗೆ 15ರಿಂದ 20 ರೂ.) ಇದರ ಮರಿಗಳಿಗೆ ಬಹಳ ಬೇಡಿಕೆ ಇದೆ. ಈ ಯೋಜನೆಯ ಮುಂದಿನ ಎಲ್ಲ ಪ್ರಗತಿಗೂ ನಮ್ಮ ಇಲಾಖೆ ಪೂರ್ಣ ಸಹಕಾರ ನೀಡುತ್ತದೆ ಎಂದು ಭರವಸೆ ನೀಡಿದರು.

ಹೊಸ್ಕೆರೆಯ ತರುಣರು ಬಹಳ ಉತ್ಸಾಹಿಗಳಾಗಿದ್ದು ಈ ಯೋಜನೆ ಯಶಸ್ವಿಯಾಗುವುದು ನಿಸ್ಸಂದೇಹ ಎಂದು ಕಚ್ಚೋಡಿ ಶ್ರೀನಿವಾಸ್ ಹೇಳಿದರು.

(4ನೇ ಪುಟಕ್ಕೆ)



ಅಂಬೇಡ್ಕರ್ — ಒಂದು ಸ್ಮರಣೆ

ಡಾ॥ ಬಿ ಆರ್ ಅಂಬೇಡ್ಕರ್ ಸ್ವತಂತ್ರ ಭಾರತದ ಸಂವಿಧಾನ ರಚಿಸಿದವರು ನಿಜ. ಅಂದ ಮಾತ್ರಕ್ಕೆ ಅವರು "ಆಧುನಿಕ ಮನು" ಅಲ್ಲ. ಅವರು ಪ್ರಮುಖವಾಗಿ ದಲಿತ ಜನಾಂಗಗಳ ಸಾಮಾಜಿಕ ಸಮಾನತೆಗಾಗಿ ಅವಿರತವಾಗಿ ಹೋರಾಡಿದ್ದು ನಿಜ. ಆದರೆ ಅವರೊಬ್ಬ ಬರೀ ದಲಿತ ಜನಾಂಗದವರ ನಾಯಕ ಮಾತ್ರ ಅಲ್ಲ; ಶೋಷಣೆ, ಅಸಮಾನತೆಗಳಿಲ್ಲದ ಒಂದು ಒಗ್ಗಟ್ಟಿನ, ಸಮೃದ್ಧ ಭಾರತ ನಿರ್ಮಾಣದ ಕನಸು ಕಂಡಿದ್ದ ಒಬ್ಬ ಸತ್ವಶಾಲಿ ರಾಷ್ಟ್ರೀಯ ನಾಯಕರು ಅವರು.

ಏಪ್ರಿಲ್ 14–ಇಂಥ ಅದಮ್ಯ ಕ್ರಿಯಾಶೀಲ ಚೇತನರಾದ ಅವರ 94ನೇ ಜನ್ಮ ದಿನ.

ಡಾ॥ ಬಿ. ಆರ್. ಅಂಬೇಡ್ಕರ್–ನಮ್ಮ ಇತಿಹಾಸ ಕಂಡ ಮಹಾನ್ ವ್ಯಕ್ತಿಗಳಲ್ಲಿ ಒಬ್ಬರು. ಅವರು ತಮ್ಮ ಕಾಲಕ್ಕೆ ಮಾತ್ರವಲ್ಲ ಸಂತತ ವರ್ತಮಾನಕ್ಕೂ ಪ್ರಸ್ತುತರಾಗುತ್ತಾರೆ. ಎಲ್ಲ ಕಾಲದವರ ಚಿಂತನೆಗಳಿಗೂ ಪ್ರಭಾವ ಬೀರುತ್ತಾರೆ ಅವರು "ಯಾವ ಅನುಕೂಲ ಅವಕಾಶಗಳಿಲ್ಲದಿದ್ದರೂ ಅಖಂಡವಾದ ಸ್ವಪರಿಶ್ರಮದಿಂದ ಈ ಶತಮಾನದ ಒಬ್ಬ ಶ್ರೇಷ್ಠ ಮೇಧಾವಿಯೆಂದು, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿಯ ಒಬ್ಬ ಅಸಾಮಾನ್ಯ ವಿಚಾರವಾದಿಯೆಂದು ಲೋಕವಿಖ್ಯಾತರಾದರು." ನಮ್ಮಲ್ಲಿ ಹಲವರಿಗೆ ಅವರೊಬ್ಬ ದಲಿತ ಜನಾಂಗದ ವಿಮೋಚನಾ ಹೋರಾಟಗಾರರಾಗಿ ಮಾತ್ರ ಕಂಡದ್ದು ದುರ್ದೈವ. ಬದುಕಿನುದ್ದಕ್ಕೂ ಅವರು ನಡೆಸಿದ ಹೋರಾಟ ಕೇವಲ ಸ್ವಂತ ಉನ್ನತಿಗಾಗಿ ಅಥವಾ ಒಂದು ಜಾತಿಯ ಉನ್ನತಿಗಾಗಿ ಮಾತ್ರವಲ್ಲದೆ, ಇಡೀ ದೇಶದ ಸರ್ವರನ್ನೂ ಸಮಾನ ಗೌರವದಿಂದ ಕಾಣುವ ಆದರ್ಶಕ್ಕಾಗಿ ಎಂಬುದನ್ನು ಮರೆಯಬಾರದು. ನಮ್ಮ ಸಂವಿಧಾನದ ಅಧಿನಿಯಮಗಳಲ್ಲಿ ಮತ್ತು ಮಾರ್ಗದರ್ಶಕ ಸೂತ್ರಗಳಲ್ಲಿ ಸಮಾನತೆಗೆ ಅವರಿತ್ತ ಒತ್ತು ಅವರ ವಿಶಾಲ ಮನೋಧರ್ಮಕ್ಕೆ ಸಾಕ್ಷಿಯಾಗಿದೆ.

ಸಹಸ್ರಾರು ವರ್ಷಗಳಿಂದ ಅಸ್ಪೃಶ್ಯರೆಂದೂ, ಪಂಚಮರೆಂದೂ ಹಿಂದೂ ಸವರ್ಣೀಯರಿಂದ ತುಳಿಯಲ್ಪಟ್ಟು ಹಲವು ಜೀವನಾವಶ್ಯಕ ಸೌಲಭ್ಯಗಳಿಂದ ವಂಚಿತರಾದ ಜನವರ್ಗದಿಂದ ಉತ್ತಾರರಾದವರು ಅಂಬೇಡ್ಕರ್ (ಅವತಾರವಲ್ಲ.) ಮಹಾರಾಷ್ಟ್ರದ ಅಂಬಾವಾಡೆಯ ರಾಮಜಿ ಸಕ್ಪಾಲ ಮತ್ತು ಭೀಮಬಾಯಿ ಎಂಬ ಮಹಾರ್ (ದಲಿತ) ಜನಾಂಗದ ದಂಪತಿಗಳಿಗೆ 1891 ಏಪ್ರಿಲ್ 14ರಂದು ಭೀಮರಾವ್ ಅಂಬೇಡ್ಕರ್ ಹದಿನಾಲ್ಕನೆಯ ಮಗನಾಗಿ ಹುಟ್ಟಿದರು. ಸತಾರೆ ಮುಂಬಯಿಗಳಲ್ಲಿ ವ್ಯಾಸಂಗ ಮಾಡಿ 1907ರಲ್ಲಿ ಮೆಟ್ರಿಕ್ಯುಲೇಷನ್ ಮುಗಿಸಿದ ಅಂಬೇಡ್ಕರ್ ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ 1912ರಲ್ಲಿ ಬಿ. ಎ. ಪದವೀಧರರಾಗಿ ಹೊರಬಂದರು.

ಅವರ ಈ ವಿದ್ಯಾರ್ಥಿ ಜೀವನ ಬಂಗಾರದ ಬದುಕಾಗಿರಲಿಲ್ಲ. ಪ್ರಾಥಮಿಕ ಶಾಲೆಯಿಂದಲೂ ಅಮಾನುಷ ದಬ್ಬಾಳಿಕೆಯನ್ನು ಅನುಭವಿಸಿದರು. ತರಗತಿಗಳಲ್ಲಿ ತನ್ನ ಅಣ್ಣನೊಡನೆ, ತಾನೇ ಮನೆಯಿಂದ ತಂದ ಗೋಣಿ ಚೀಲ ಹಾಸಿಕೊಂಡು ಕೂರಬೇಕಾಯಿತು. ಕುಡಿಯಲು ಒಂದು ಹನಿ ನೀರೂ ಕೂಡ ಸವರ್ಣೀಯರಿಂದ ದೊರೆಯುತ್ತಿರಲಿಲ್ಲ. ಅವರ ಬಾಲ್ಯದ ಈ ಅನುಭವಗಳೇ ಒಂದು ಬೃಹತ್ ವಿದ್ರೋಹವಾದೀತು. ಈ ಯಾತನಾ ಶಿಬಿರದ ಅನುಭವವೇ ಮುಂದೆ ಅವರನ್ನು ಅಸ್ಪೃಶ್ಯರ, ದಲಿತ ಜನಾಂಗದ ಬಿಡುಗಡೆಯ ಹೋರಾಟಕ್ಕೆ ಅಣಿಗೊಳಿಸಿತು.

ಇಲ್ಲಿ ಒಂದು ಸಂಗತಿಯನ್ನು ನೆನಪಿಡಬೇಕು. ಗಾಂಧೀಜಿಯವರು ಕೂಡ ಅಸ್ಪೃಶ್ಯತೆಯ ವಿರುದ್ಧ ಹೋರಾಡಿದವರೆ. ಆದರೆ ಅವರ ಉದ್ದೇಶ ಅಸ್ಪೃಶ್ಯತೆಯ ನಿವಾರಣೆಯಾದರೂ ವರ್ಣ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದೇ ಆಗಿತ್ತು. ಅಂಬೇಡ್ಕರರ ದೃಷ್ಟಿ ಇದಕ್ಕೆ ವಿರುದ್ಧವಾಗಿತ್ತು; ವರ್ಣ ವ್ಯವಸ್ಥೆಯನ್ನೇ ಅವರು ನಿರಾಕರಿಸಿದ್ದರು. ಗಾಂಧೀಜಿಗಿದ್ದ ಜನಬೆಂಬಲದಿಂದ ಅಂಬೇಡ್ಕರರ ವರ್ಣ ವ್ಯವಸ್ಥೆಯ ನಿರ್ಮೂಲನದ ಹೋರಾಟಕ್ಕೆ ಆತ್ಮಘಾತುಕ ಬರಸಿಡಿಲೆಂಗಿದ್ದು ನಮ್ಮ ಇತಿಹಾಸದ ದುರಂತಗಳಲ್ಲಿ ಒಂದು; ಬಹು ಮುಖ್ಯವಾದುದು. "ವರ್ಣ ವ್ಯವಸ್ಥೆಯನ್ನು ಒಪ್ಪದೆ ಹಿಂದು ಧರ್ಮವನ್ನು ಒಪ್ಪುವುದು ನನ್ನಿಂದಾಗದು,...ಈ ವಿಚಾರದಲ್ಲಿ ಅಂಬೇಡ್ಕರ್‌ರವರಿಂದ ನಾನು ಬೇರೆಯಾಗುತ್ತೇನೆ" ಎಂಬ ಗಾಂಧೀಜಿಯವರ ಮಾತನ್ನು ಇಲ್ಲಿ ಸ್ಮರಿಸಬಹುದು.

ಕೆ. ಪುಟ್ಟಯ್ಯ

ಬರೋಡೆಯ ಮಹಾರಾಜರ ವಿದ್ಯಾರ್ಥಿ ವೇತನದ ಪ್ರೋತ್ಸಾಹದೊಂದಿಗೆ ಅಂಬೇಡ್ಕರ್ ಉನ್ನತ ವ್ಯಾಸಂಗಕ್ಕಾಗಿ 1913 ಜುಲೈ ಕೊನೆಯವಾರ ಅಮೇರಿಕೆಗೆ ಹೊರಟರು. ಅಮೆರಿಕೆಯಲ್ಲಿ ಪ್ರಥಮಬಾರಿಗೆ ಸ್ವತಂತ್ರ ಬದುಕಿನ, ಆತ್ಮಗೌರವದ ಅನುಭವವನ್ನು ಪಡೆದರು. ಅವರಲ್ಲಿ ಸ್ವತಂತ್ರ–ಪ್ರಜಾಪ್ರಭುತ್ವದ ದೃಢನಂಬಿಕೆಗೆ ಅಮೇರಿಕೆಯ ವಿದ್ಯಾಭ್ಯಾಸ ಕಾರಣವಾದಂತೆ ತೋರುತ್ತದೆ. ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಪ್ರತಿ ದಿನವೂ ಹದಿನೆಂಟು ಗಂಟೆಗಳ ಕಾಲ ವ್ಯಾಸಂಗದಲ್ಲಿ ತೊಡಗುತ್ತಿದ್ದರೆಂದರೆ ಅವರ ಜ್ಞಾನಲಾಲಸೆಯ ಉತ್ಕಟತೆ ಯಾವ ಬಗೆಯದೆಂದು ಊಹಿಸಬಹುದು. ಅವರು ಅಲ್ಲಿ ಎಂ.ಎ. ಪದವಿಯ ಜೊತೆಗೆ ಪಿ. ಎಚ್‌ಡಿ. ಪದವಿಯನ್ನೂ ಗಳಿಸಿದರು. ಭಾರತೀಯ ಹಣಕಾಸು ವ್ಯವಸ್ಥೆಯನ್ನು ಕುರಿತಾದ ಅವರ ಪಿ.ಎಚ್‌ಡಿ. ನಿಬಂಧವನ್ನು ಕುರಿತು ಅರ್ಥಶಾಸ್ತ್ರಜ್ಞ ಸೆಲಿಗ್ಮನ್ "ಹಣಕಾಸು ವ್ಯವಸ್ಥೆಯ ಮೂಲತತ್ವಗಳ ಪರಿಶೀಲನೆಯನ್ನೇ ಅಂಬೇಡ್ಕರ್ ಮಾಡಿದ್ದಾರೆ. ನನಗೆ ತಿಳಿದ ಹಾಗೆ ಇಂಥವನ್ನು ಬೇರೆ ಯಾರೂ ಮಾಡಿಲ್ಲ" ಎಂದಿದ್ದಾರೆ.

ಅಮೇರಿಕೆಯ ಸ್ವತಂತ್ರ ಜೀವನದ ಹೃದಯವಂತಿಕೆ ಅಂಬೇಡ್ಕರರನ್ನು ಒಬ್ಬ ಪಾರ್ಲಿಮೆಂಟರಿ ಪ್ರಜಾಸತ್ತೆಯ ಪ್ರತಿಪಾದಕನನ್ನಾಗಿ ರೂಪಿಸಿದರೂ ಅವರೊಬ್ಬ ಬಂಡವಾಳಶಾಹಿ ಪ್ರತಿಗಾಮಿ ಚಿಂತಕರಾಗಿರಲಿಲ್ಲ. "ಸಮಾಜದಲ್ಲಿ ಎದ್ದು ಕಾಣುವ ಅಸಮಾನತೆಗಳಿರಬಾರದು, ಸಂಪೂರ್ಣ ಹೊರೆ ಹೊತ್ತ ಶೋಷಿತರು ಮತ್ತು ಎಲ್ಲಾ ಸವಲತ್ತುಗಳನ್ನು ಹೊಂದಿರುವ ವರ್ಗಗಳು ಇರಬಾರದು" ಎಂದು ಪ್ರಜಾಸತ್ತೆಯ ರೂಪುರೇಷೆಗಳನ್ನು ವಿವರಿಸುವಲ್ಲಿ ಅವರು ಹೇಳಿರುವುದನ್ನು ಗಮನಿಸಿದರೆ, ಅವರೊಬ್ಬ ಪುರೋಗಾಮಿ ನೇತಾರರೆಂಬುದು ಸ್ಪಷ್ಟ.

ಅಮೇರಿಕೆಯಲ್ಲಿ ಡಾಕ್ಟರೇಟ್ ಪದವಿ ಪಡೆದು ಹಿಂತಿರುಗಿದ ಅಂಬೇಡ್ಕರ್ ಬರೋಡೆ ಸಂಸ್ಥಾನದಲ್ಲಿ ಮಿಲಿಟರಿ ಕಾರ್ಯದರ್ಶಿ ವೃತ್ತಿಯನ್ನು ಕೈಗೊಂಡರು. ಆದರೆ ಅಲ್ಲಿಯೂ ಕೂಡ ಅವರಿಗೆ ಸಾಮಾನ್ಯ ಮನುಷ್ಯಮಾತ್ರನಿಗೆ ದೊರೆಯಬಹುದಾದ ಗೌರವವೂ ಸಿಗಲಿಲ್ಲ. ಅಸ್ಪೃಶ್ಯರೆಂಬ ಕಾರಣಕ್ಕಾಗಿ ಪೇದೆಗಳು ಕೂಡ ಕಾಗದದ ಕಟ್ಟುಗಳನ್ನು ದೂರದಿಂದ ಅವರ ಮೇಜಿನ ಮೇಲೆ ಎಸೆಯುತ್ತಿದ್ದರು. ಕಾರ್ಯಾಲಯದಲ್ಲಿ ಕುಡಿಯುವ ನೀರಿನಿಂದಲೂ ಅವರು ವಂಚಿತರಾಗಿದ್ದರು. ಅವರು ತಂಗುಮನೆಯಲ್ಲಿ ಇಳಿದುಕೊಂಡಿದ್ದನ್ನು ಸಹಿಸದ ಕೆಲ ಪಾರಸಿಗಳು ಅವರನ್ನು ಬಿಟ್ಟು ಹೋಗುವಂತೆ ಬಲವಂತಪಡಿಸಿದರು. ಊರಲ್ಲಿ ಯಾವ ಹಿಂದುವೂ ಯಾವ ಮುಸ್ಲಿಮನೂ ಅವರಿಗೆ ಆಶ್ರಯ ಕೊಡಲು ಒಪ್ಪಲಿಲ್ಲ. ಇಂಥ ಸ್ಥಿತಿಯಲ್ಲಿ ಅವರು ತಮ್ಮ ಕೆಲಸವನ್ನೇ ಬಿಡಬೇಕಾಗಿ ಬಂತು

ಬಾಲ್ಯದಿಂದ ಅನುಭವಿಸಿದ ಅಪಮಾನದ ಪರಂಪರೆ ಅಂಬೇಡ್ಕರರನ್ನು ಹೋರಾಟದ ಹಾದಿಯತ್ತ ತಿರುಗಿಸಿತು. ಶತಮಾನಗಳಿಂದಲೂ ಊರ ಹೊರಗೆ ಕೊಂಪೆಯಲ್ಲಿ ಬದುಕಿದ ಜನ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ–ಈ ಎಲ್ಲಾ ಕ್ಷೇತ್ರಗಳಲ್ಲೂ ಶೋಷಿತರಾದ ಪಂಚಮರಿಗೆ ಆತ್ಮಗೌರವವನ್ನು ತಂದುಕೊಡುವುದು ತನ್ನ ಪ್ರಥಮ ಗುರಿಯೆಂಬುದನ್ನು ಅಂಬೇಡ್ಕರ್ ಮನಗಂಡರು. ಅವರಿಗೆ ತಾನು ಮತ್ತು ತನ್ನ ಜನಾಂಗ ಹಿಂದೂ ಸಮಾಜದಲ್ಲಿ ಇರುವಷ್ಟು ದಿನವೂ ಪಂಚಮರಾಗಿಯೇ ಉಳಿಯಬೇಕಾದೀತು ಎಂಬ ಆತಂಕ ಬಂದದ್ದು ಸಹಜವಾಗಿದೆ.

"....ನನಗೆ ತಾಯಿನಾಡು ಎಂಬುದೇ ಇಲ್ಲವಾಗಿದೆ ... ನನ್ನನ್ನು ನಾಯಿ–ನರಿಗಳಿಗಿಂತ ಕಡೆಯಾಗಿ ಕಾಣುತ್ತಿರುವಾಗ, ನಮಗೆ ಕುಡಿಯಲು ನೀರು ಸಹ ಸಿಗದಿರುವಾಗ, ಈ ನಾಡು ನನ್ನದು ಎಂದು ಹೇಗೆ ಹೇಳಲಿ?...."

"ರಾಜ್ಯಾಧಿಕಾರಕ್ಕಾಗಿ ಸವರ್ಣೀಯರು ಬ್ರಿಟೀಷರಿಗೆ ಎದುರು ನಿಲ್ಲುವುದು ನ್ಯಾಯವಾದರೆ, ನ್ಯಾಯವಾದ ಅಧಿಕಾರಾವಕಾಶಗಳಿಗಾಗಿ ಅಸ್ಪೃಶ್ಯರು ಸವರ್ಣೀಯರಿಗೆ ಎದುರು ನಿಲ್ಲುವುದೂ ನ್ಯಾಯ" ಎಂದು ಅಂಬೇಡ್ಕರ್ ವಾದಿಸಿದ್ದು ಸಕಾರಣವಾಗಿದೆ.

ಅಂಬೇಡ್ಕರರಿಗೆ ಏಕಾಂಗಿಯಾಗಿ ಹೋರಾಡಿ ಇಡೀ ಜನಾಂಗದ ಆಶೋತ್ತರಗಳನ್ನು ಈಡೇರಿಸುವುದು ಅಸಾಧ್ಯವೆಂಬುದು ತಿಳಿದಿತ್ತು. 1924ರಲ್ಲಿ "ಬಹಿಷ್ಕೃತ ಹಿತಕಾರಿಣಿ ಸಭಾ" ಎಂಬ ಸಂಘಟನೆಯನ್ನು ಅವರು ಸ್ಥಾಪಿಸಿದರು. ಅದರ ಗುರಿ ವಿದ್ಯಾಭ್ಯಾಸ, ಹೋರಾಟ ಮತ್ತು ಸಂಘಟನೆಯಾಗಿತ್ತು. 1927ರಲ್ಲಿ ಮಹದ್‌ನ ಚಾದರ್ ಕೆರೆಯ ನೀರನ್ನು ಉಪಯೋಗಿಸಲು ಅಸ್ಪೃಶ್ಯರಿಗೂ ಅವಕಾಶ ಸಿಗಬೇಕೆಂದು ಬೃಹತ್ ಸತ್ಯಾಗ್ರಹವನ್ನು ನಡೆಸಿದರು. ಅದೇ ವರ್ಷ ವರ್ಣ ವ್ಯವಸ್ಥೆಯನ್ನು ಪ್ರತಿಪಾದಿಸುವ 'ಮನುಸ್ಮೃತಿ'ಯನ್ನು ಬಹಿರಂಗವಾಗಿ ಸುಡಲಾಯಿತು. 1930ರಲ್ಲಿ ನಾಸಿಕದ ಕಾಲಾರಾಮ್ ದೇವಸ್ಥಾನದ ಪ್ರವೇಶ ಮತ್ತು ರಥ ಎಳೆಯುವ ಹಕ್ಕಿಗಾಗಿ ಸತ್ಯಾಗ್ರಹವನ್ನು ಸಂಘಟಿಸಿದರು.

"... ಜಾತಿ–ಮತ–ಪಂಥಗಳು ಎಷ್ಟಿದ್ದರೂ ಒಂದಿಲ್ಲೊಂದು ರೀತಿಯಲ್ಲಿ ನಾವು (ಭಾರತೀಯರು) ಖಂಡಿತವಾಗಿ ಒಂದು ಜನಾಂಗವಾಗಿ ನಿಲ್ಲುತ್ತೇವೆ ಎಂಬುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ..."

ಈ ಬಗೆಯ ಹೋರಾಟಗಳು ಮೇಲು ನೋಟಕ್ಕೆ ಉದಾರವಾದಿ ಕಾರ್ಯಾಚರಣೆಯಾಗಿ ಕಂಡರೂ, ಅಂಬೇಡ್ಕರರ ಕಾಲದ ಅನಿವಾರ್ಯ ಐತಿಹಾಸಿಕ ಅಗತ್ಯವೆಂಬುದನ್ನು ಮರೆಯಬಾರದು. ಏಕೆಂದರೆ ಅಂತಹ ಧಾರ್ಮಿಕ ವಿಧಿಗಳಿಂದ ದೂರವಾಗಿಯೇ ಉಳಿದ ಅಸ್ಪೃಶ್ಯರಿಗೆ 'ಕೀಳರಿಮೆ' ಸ್ಥಿರವಾಗಿ ಬಿಡುವ ಸಾಧ್ಯತೆಯೇ ಹೆಚ್ಚು ಎಂದು ಅಂಬೇಡ್ಕರ್ ಮನಗಂಡಿದ್ದರು.

❖ ❖ ❖

ಅಸ್ಪೃಶ್ಯರಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಸ್ಥಾನಗಳನ್ನು ಕಾದಿರಿಸಬೇಕು ಎಂದು ಅಂಬೇಡ್ಕರ್ 1928ರಿಂದಲೇ ಪ್ರತಿಪಾದಿಸಿದವರು. ಆದರೆ ಗಾಂಧೀಜಿ ಮುಸ್ಲಿಂ ಮತ್ತು ಕ್ರೈಸ್ತರಿಗೆ ಅಲ್ಪಸಂಖ್ಯಾತರ ವಿಶೇಷ

(3ನೇ ಪುಟಕ್ಕೆ)

ಓದುಗರ ಪತ್ರ

ಸಾರ್ಥಕ್ಯದ ಹಿಂದಿನ ಪ್ರಯತ್ನ

ಪ್ರಾನ್ಯರೆ.

ತಮ್ಮ ಹಿಂದಿನ ಎರಡು ಸಂಚಿಕೆಗಳಲ್ಲೂ ಹಲವು ಜನ ಬಿಲಗದ್ದೆ ನಾಗರಿಕರು ಇಲ್ಲಿನ ಶಾನುವಳ್ಳಿ–ಕಾವಡಿ ಮಾರ್ಗದಲ್ಲಿ ಮೃಗವಧೆಯಿಂದ ವೇಗೂರಿಗೆ ಬಸ್ ಸಂಚಾರ ಏರ್ಪಡಿಸಿದ್ದರ ಕುರಿತು ಕರ್ನಾಟಕ ಸರ್ಕಾರ, ಜನತಾ ಪಕ್ಷ ಮತ್ತು ಶಂಕರ ಸಾರಿಗೆ ಸಂಸ್ಥೆಯ ಮಾಲಿಕರಿಗೆ ಅಭಿನಂದನೆಯನ್ನು ಸಲ್ಲಿಸಿದ್ದು ಓದಿದೆ. ಸಂತೋಷ. ಆದರೆ ಕೃತಜ್ಞತೆ, ಅಭಿನಂದನೆ ಸೂಚಿಸುವಾಗ ಕೇವಲ ಫಲಿತಾಂಶದ ಬಗ್ಗೆ ಮಾತ್ರ ದೃಷ್ಟಿಯಿಟ್ಟಂತಿದೆ. ಸಾರ್ಥಕ್ಯದ ಹಿಂದಿನ ಪ್ರಯತ್ನದ ಕಡೆ ಕಣ್ಣಿಟ್ಟಾಗ ಸಾರ್ವಜನಿಕ ಸೇವೆಯಲ್ಲಿ ನಿಸ್ವಾರ್ಥತೆಯಿಂದ ಸದಾ ಶ್ರಮಿಸುತ್ತಿರುವ ಶ್ರೀಯುತ ಆಸಗೋಡು ವಾಸಪ್ಪ ಗೌಡರ ಪ್ರಯತ್ನ ಸ್ಮರಣೀಯವಲ್ಲವೆ?

—**ವೆಂಕಟೇಶ್**, ಕೆಸಗೋಡು.

ಪ್ರಿಯ ಓದುಗರಲ್ಲಿ,

ಕಿಗ್ಗ ದೇವಸ್ಥಾನದಲ್ಲಿ ಸಹಪಂಕ್ತಿ ಭೋಜನದ ಒತ್ತಾಯದ ಬಗ್ಗೆ ನಮ್ಮ ಪತ್ರಿಕೆಯ 'ವೇದಿಕೆ'ಯ ಮೂಲಕ ಓದುಗರಿಂದ ಅಭಿಪ್ರಾಯ ಆಹ್ವಾನಿಸಿದ್ದಕ್ಕೆ ಅಪಾರ ಸಂಖ್ಯೆಯಲ್ಲಿ ಪ್ರತಿಕ್ರಿಯೆಗಳು ಬಂದಿವೆ. ಇನ್ನೂ ಬರುತ್ತಿವೆ.

ಈ ವಾರ ಸ್ಥಳಾಭಾವದಿಂದ ಅವುಗಳನ್ನು ಪ್ರಕಟಿಸಿಲ್ಲ. ಮುಂದಿನ ಸಂಚಿಕೆಯಲ್ಲಿ ಈ ಪ್ರತಿಕ್ರಿಯೆಗಾಗಿಯೇ ವಿಶೇಷವಾಗಿ ಎರಡು ಅಥವಾ ಹೆಚ್ಚು ಪುಟಗಳನ್ನು ಅಚ್ಚು ಮಾಡಿ, ಸಾಧ್ಯವಾದ ಮಟ್ಟಿಗೆ ಎಲ್ಲಾ ಅಭಿಪ್ರಾಯಗಳನ್ನೂ ಪ್ರಕಟಿಸಲು ಯತ್ನಿಸುತ್ತೇವೆ.

ಒಂದು ವಿಚಾರ ದಯವಿಟ್ಟು ನೆನಪಿಡಿ. ಅನಾಮಧೇಯ ಪತ್ರಗಳಿಗೆ ಇಲ್ಲಿ ಅವಕಾಶವಿಲ್ಲ. ಪತ್ರವು ವಿಚಾರಕ್ಕೆ ಸೀಮಿತವಾಗಿ ಆದಷ್ಟೂ ಸಂಕ್ಷಿಪ್ತವಾಗಿರಲಿ.

—**ಸಂಪಾದಕ.**

ಅಂಬೇಡ್ಕರ್ — ಒಂದು ಸ್ಮರಣೆ

(ಎರಡನೇ ಪುಟದಿಂದ)

ಸವಲತ್ತುಗಳನ್ನು ಕೊಡಲು ಒಪ್ಪಿ ದಲಿತರಿಗೆ ಅವನ್ನು ನಿರಾಕರಿಸಿದ್ದು ಅಂಬೇಡ್ಕರರಿಗೆ ತುಂಬಾ ಆಘಾತವನ್ನುಂಟುಮಾಡಿತ್ತು. ಎರಡನೇ ದುಂಡು ಮೇಜಿನ ಪರಿಷತ್ತಿಗೆ (1931) ಹೊರಡುವ ಹೊತ್ತಿಗಾಗಲೇ ಇವರಿಬ್ಬರ ನಡುವಿನ ಕಂದರ ಸಾಕಷ್ಟು ಆಳವಾಗಿತ್ತು.

ಅದೇ ಕಾಲದಲ್ಲಿ ಗಾಂಧೀಜಿಯವರನ್ನು ಅಂಬೇಡ್ಕರ್ ಭೇಟಿ ಮಾಡಿದಾಗಿನ ಅವರ ಸಂವಾದದಿಂದ ಇಬ್ಬರೊಳಗಿನ ಭಿನ್ನಾಭಿಪ್ರಾಯದ ಸ್ಪಷ್ಟ ಚಿತ್ರಣ ದೊರೆಯುತ್ತದೆ. ಗಾಂಧೀಜಿ ತಾನು ಕಾಂಗ್ರೆಸ್ ಸಂಸ್ಥೆಯ ಮೂಲಕ ಅಸ್ಪೃಶ್ಯರ ಉದ್ಧಾರಕ್ಕೆ ಶ್ರಮಿಸಿರುವುದಾಗಿ, ಅಂಬೇಡ್ಕರ್ ಹುಟ್ಟುವ ಮೊದಲೂ ಯೋಚಿಸಿರುವುದಾಗಿ ಹೇಳುತ್ತಾರೆ. ಆಗ ಅಂಬೇಡ್ಕರ್, "ವಯಸ್ಸನ್ನು ಎತ್ತಿ ಹೇಳುವುದು ಹಿರಿಯರ ಒಂದು ಅಭ್ಯಾಸ. ಆದರೆ ಕಾಂಗ್ರೆಸ್ ದಲಿತರ ವಿಷಯದಲ್ಲಿ ಉಪಚಾರದ ಮಾತುಗಳನ್ನಾಡುವುದಕ್ಕಿಂತ ಹೆಚ್ಚಿನದೇನನ್ನೂ ಮಾಡಿಲ್ಲ" ಎನ್ನುತ್ತಾರೆ.

ಅವರು ಮುಂದುವರಿದು, ನನಗೆ "ತಾಯಿನಾಡು ಎಂಬುದೇ ಇಲ್ಲವಾಗಿದೆ....ನಮ್ಮನ್ನು ನಾಯಿ ನರಿಗಳಿಗಿಂತ ಕಡೆಯಾಗಿ ಕಾಣುತ್ತಿರುವಾಗ, ಕುಡಿಯುವುದಕ್ಕೆ ನೀರೂ ಸಿಗದಿದ್ದಾಗ, ಈ ನಾಡು ನನ್ನದು ಎಂದು ಹೇಗೆ ಹೇಳುವುದು?" ಎನ್ನುತ್ತಾರೆ. ಆದರೆ "ಅಸ್ಪೃಶ್ಯರನ್ನು ಹಿಂದುಗಳಿಂದ ಬೇರ್ಪಡಿಸುವುದು ಆತ್ಮಘಾತುಕ" ಎಂಬುದು ಗಾಂಧೀಜಿಯವರ ಅಚಲ ನಿಲುವಾಗಿತ್ತು. ಗಾಂಧೀಜಿಯವರ ಹಿಂದೂ ಏಕತೆಯ, ಅಸ್ಪೃಶ್ಯತೆ ನಿವಾರಣೆಯ ಆದರ್ಶ ಯಾರೂ ಅಲ್ಲಗಳೆಯಲಾಗದಷ್ಟು ಪ್ರಾಮಾಣಿಕವಾಗಿತ್ತು. ಆದರೆ ಅಂಬೇಡ್ಕರರಿಗೆ ಈ ಆದರ್ಶ ವರ್ಣ ವ್ಯವಸ್ಥೆ ಇರುವವರೆಗೆ ಸಾಧ್ಯವಿಲ್ಲವೆಂಬ ವಾಸ್ತವಿಕತೆಯ ಅರಿವಿತ್ತು. ಈ ಬಗ್ಗೆ ಅವರ ಅಭಿಪ್ರಾಯ ಖಚಿತವಾಗಿತ್ತು.

ಬ್ರಿಟಿಷ್ ಸರಕಾರ ನಿಮ್ನ ವರ್ಗದವರಿಗೆ, ಮುಸ್ಲಿಂ, ಸಿಖ್ ಮತ್ತು ಕ್ರೈಸ್ತರಿಗೆ ಪ್ರತ್ಯೇಕ ಮತ ಕ್ಷೇತ್ರಗಳನ್ನು ಘೋಷಿಸಿತು. ಇದರಿಂದ ಗಾಂಧೀಜಿಗೆ ಆಘಾತವಾಗಿರಬೇಕು. ಅವರಿಗಿದು ಅಸ್ಪೃಶ್ಯರನ್ನು ಹಿಂದೂಗಳಿಂದ ಬೇರ್ಪಡಿಸುವ ಬ್ರಿಟಿಷ್ ತಂತ್ರವಾಗಿ ತೋರಿತು. ಅದಕ್ಕಾಗಿ ಗಾಂಧೀಜೀ ಆಮರಣಾಂತ ಉಪವಾಸವನ್ನೇ ಕೈಗೊಂಡರು. ಅಂಬೇಡ್ಕರ್ ಅವರನ್ನು ಸಂತೈಸಲು ಹೋದಾಗ "ಹಿಂದೂ ಸಮಾಜ ಒಡೆದು ಹೋಗುವುದನ್ನು ತಡೆಯುವುದಕ್ಕಾಗಿ ನನ್ನ ಜೀವ ಕೊಡಲೂ ನಾನು ಸಿದ್ಧ" ಎಂದು ಗಾಂಧೀಜಿ ತಮ್ಮ ಸ್ಪಷ್ಟ ನಿಲುವನ್ನು ಹೇಳಿದರು. ಕೊನೆಗೆ **ಗಾಂಧೀಜಿಯ ಪ್ರಾಣ ಉಳಿಸುವುದಕ್ಕಾಗಿ ಅವರ ನಿಲುವನ್ನು ಅಂಬೇಡ್ಕರ್ ಒಪ್ಪಿ, "ಪ್ರತ್ಯೇಕ ಮತದಾನ ಪದ್ಧತಿ"ಗೆ ಬದಲು "ಮೀಸಲು ಪದ್ಧತಿ"ಗೆ ಸಮ್ಮತಿಸಬೇಕಾಯಿತು**

ಈ ಎಲ್ಲದರ ಹಿನ್ನೆಲೆಯಲ್ಲಿ, ಹಿಂದೂ ಧರ್ಮದಲ್ಲಿ ವರ್ಣ ವ್ಯವಸ್ಥೆ ಉಳಿಸಿಕೊಂಡೂ ಸಮಾನರಾಗಿ ಬಾಳುವುದು ಸಾಧ್ಯವಿಲ್ಲವೆಂಬ ನಿಲುವಿಗೆ ಬಂದಿದ್ದ ಅಂಬೇಡ್ಕರರಿಗೆ ಅಸಮಾನತೆಯ ಹಿಂದೂ ಧರ್ಮದ ಬಗ್ಗೆ ಎಷ್ಟು ಜಿಗುಪ್ಸೆ ಬಂದಿತ್ತೆಂದರೆ ತಾನು ಸಾಯುವಾಗಲಾದರೂ ಹಿಂದುವಾಗಿ ಸಾಯಬಾರದು ಎನ್ನುತ್ತಿದ್ದರು. ("I solemnly assure you that I will not die a Hindu")

ಇಷ್ಟೆಲ್ಲಾ ಕಹಿ ಅನುಭವಗಳನ್ನು ಅನುಭವಿಸಿಯೂ ಮುಂದೆ ಭಾರತದ ಸಂವಿಧಾನ ರಚನೆಯ ಹೊಣೆಗಾರಿಕೆ ಅಂಬೇಡ್ಕರ್‌ರಿಗೇ ಬಂದದ್ದು ಅವರ ಅಪ್ರತಿಮ ಕ್ರಿಯಾಶೀಲ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. "ಜಾತಿಮತ ಪಂಥಗಳು ಎಷ್ಟಿದ್ದರೂ ಒಂದಿಲ್ಲೊಂದು ರೀತಿಯಲ್ಲಿ ನಾವು ಖಂಡಿತವಾಗಿ ಒಂದು ಜನಾಂಗವಾಗಿ ನಿಲ್ಲುತ್ತೇವೆ ಎನ್ನುವುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ" ಎಂಬುದು ಅವರು ಹೇಳುತ್ತಿದ್ದ ಮಾತಾಗಿತ್ತು. ಇದನ್ನು ಸಂವಿಧಾನದಲ್ಲೂ ಪ್ರತಿಪಾದಿಸಿದ್ದಾರೆ. (ಸಂವಿಧಾನ ರಚನೆಯಲ್ಲಿ ಅವರು ತೋರಿದ ಸೂಕ್ಷ್ಮತೆ, ವಿಚಾರಗಳನ್ನೆಲ್ಲ ಇಲ್ಲಿ ಸೇರಿಸಿಲ್ಲ.)

ಅಂಬೇಡ್ಕರ್ ನೆಹರೂರವರ ಕೋರಿಕೆಯಂತೆ ಸ್ವತಂತ್ರ ಭಾರತದ ಮೊದಲ ಕಾನೂನು ಮಂತ್ರಿಯಾದರು. ಆದರೆ ಕೆಲವೇ ತಿಂಗಳಲ್ಲಿ, ಹಿಂದೂ ಸಂಹಿತೆಯ ಮಸೂದೆ ಬಗ್ಗೆ ಕಾಂಗ್ರೆಸ್ ತಳೆದ ಪ್ರಗತಿ ವಿರೋಧಿ ನಿಲುವನ್ನು ಪ್ರತಿಭಟಿಸಿ, ಸಚಿವ ಸ್ಥಾನ ತ್ಯಜಿಸಿ ಹೊರಬಂದರು.

ಸಂವಿಧಾನದ ಕರಡನ್ನು ಸಿದ್ಧಪಡಿಸಲು ರಚಿತವಾದ ಸಮಿತಿಗೆ ಅವರು ಕಾರ್ಯಾಧ್ಯಕ್ಷರಾದರು. ಆರು ತಿಂಗಳ ಅಖಂಡ ಪರಿಶ್ರಮದಿಂದ 1948 ಫೆಬ್ರವರಿಯ ಕೊನೆಯಲ್ಲಿ ಅಂಬೇಡ್ಕರರು ಸಂವಿಧಾನದ ಕರಡನ್ನು ಬರೆದು ಮುಗಿಸಿದರು.

ಹಿಂದೂ ಸಮಾಜವನ್ನು ವರ್ಣರಹಿತ ಸಮಾನತೆಯ ಧರ್ಮವನ್ನಾಗಿ ಪರಿವರ್ತಿಸುವುದು ಸಾಧ್ಯವಿಲ್ಲ ಎಂಬ ಅರಿವು ಅಂಬೇಡ್ಕರ್ ಬೌದ್ಧ ಧರ್ಮದತ್ತ ಆಕರ್ಷಿತರಾಗಲು ಕಾರಣವಾಯಿತು. "ನೀತಿಯನ್ನಾಧರಿಸಿದ ಧರ್ಮವನ್ನು ಬೋಧಿಸಿದ ಬುದ್ಧ ಮನುಷ್ಯನಾಗಿದ್ದ. (ದೇವರೆಂದು ಹೇಳಿಕೊಂಡಿರಲಿಲ್ಲ) ....ನೀತಿಪರವಾದ ನಡೆಯೇ ಧರ್ಮ ಎಂದು ಬುದ್ಧ ಹೇಳಿದರೆ, ಯಜ್ಞ ಯಾಗಾದಿಗಳೇ ಧರ್ಮ ಎಂದು ಬ್ರಾಹ್ಮಣರು ಹೇಳಿದರು. ಬುದ್ಧ ಸಮಾನತೆಯನ್ನು ಬೋಧಿಸಿದ; ಚಾತುರ್ವರ್ಣ್ಯವನ್ನು ಪುರಸ್ಕರಿಸುವ ಹಿಂದೂ ಧರ್ಮ ಅಸಮಾನತೆಯನ್ನು ಬೋಧಿಸಿತು...." ಅಂಬೇಡ್ಕರರ ಈ ಮಾತುಗಳು ಅವರನ್ನು ಬೌದ್ಧ ಧರ್ಮಾವಲಂಬಿಯಾಗುವಂತೆ ಪ್ರೇರೇಪಿಸಿದ ಮರ್ಮ ಯಾವುದೆಂಬುದನ್ನು ತೋರಿಸುತ್ತವೆ.

ಆಕ್ಟೋಬರ್ 14, 1956 ವಿಜಯದಶಮಿಯ ದಿನ, ನಾಗಪುರದಲ್ಲಿ ಸಾವಿರಾರು ಅನುಯಾಯಿಗಳೊಂದಿಗೆ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಅಂದವರು ಆಡಿದ ಮಾತುಗಳು ಹೀಗಿವೆ: "ಅಸಮಾನತೆಯ ತವರಾಗಿರುವ ಹಿಂದೂ ಧರ್ಮವನ್ನು ವಾನಿಂದು ತ್ಯಜಿಸಿ ದ್ವಿಜನಾಗಿದ್ದೇನೆ. ಪುನರ್ಜನ್ಮದಲ್ಲಿ ನನಗೆ ನಂಬಿಕೆ ಇಲ್ಲ. ಬುದ್ಧ ವಿಷ್ಣುವಿನ ಅವತಾರವಲ್ಲ. ಬುದ್ಧ ಬೋಧಿಸಿದ ಅಷ್ಟ ವಿಧ ಮಾರ್ಗವನ್ನು ಮಾತ್ರ ಅಚರಿಸುತ್ತೇನೆ. ಬೌದ್ಧ ಧರ್ಮವೇ ನಿಜವಾದ ಧರ್ಮ. ಅದರ ಮೂಲ ತತ್ವಗಳಾದ ಪ್ರಜ್ಞೆ **ಸಮತೆ ಮತ್ತು ಕರುಣೆ**–ಈ ಮೂರನ್ನು ನನ್ನ ಬದುಕಿನ ದಾರಿದೀಪಗಳನ್ನಾಗಿಸಿಕೊಳ್ಳುತ್ತೇನೆ"

ಅಂಬೇಡ್ಕರರ ಜೀವನ– ಹೋರಾಟಗಳು ಯಾವತ್ತೂ ಸ್ಫೂರ್ತಿಯ ಸೆಲೆಯಾಗಿವೆ. ಜಾತಿಯ ವ್ಯವಸ್ಥೆ ಇರುವವರೆಗೆ ಜಾತಿಯ ವಿರುದ್ಧ ಹೋರಾಟ ಅನಿವಾರ್ಯ ಎಂಬುದನ್ನು ಅವರ ಬದುಕು ಸಾಬೀತು ಮಾಡಿದೆ. ಅವರ ಕನಸಿನ ಸಮಾನತೆಯ ಭಾರತ ಇನ್ನೂ ಉದಯವಾಗಿಲ್ಲ. ಈ ದಿಶೆಯಲ್ಲಿ ನಾವೆಲ್ಲ ಗಂಭೀರವಾಗಿ ಚಿಂತಿಸಬೇಕಾಗಿದೆ.

ಆಕರಗಳು: (1) ವಿ. ಎಂ. ಇನಾಂದಾರ್: 'ಡಾ|| ಅಂಬೇಡ್ಕರ್'. (2) [illegible] 'ಪ್ರಜಾ[illegible]ಪಾತ್ಯ'–ಭಾಗ 3 ; (3) ಡಾ|| ವಿ. [illegible] ಯವರ: 'ಅಂಬೇಡ್ಕರ್–ಒಂದು [illegible]'

ಶೃಂಗೇರಿ ಜೇಸೀಸ್ ಆಶ್ರಯದಲ್ಲಿ

'ಮಾನಸಿಕ ಕ್ಲೇಶ' ಕುರಿತ ಉಪನ್ಯಾಸ

(ವರದಿ: ಕೆ. ಪುಟ್ಟಯ್ಯ)

ಶೃಂಗೇರಿ ಜೇಸೀಸ್ ಆಶ್ರಯದಲ್ಲಿ, ಬೆಂಗಳೂರು ವಿಶ್ವ ವಿದ್ಯಾಲಯ ಶಿಕ್ಷಣ ವಿಭಾಗದ ಅಧ್ಯಾಪಕರಾದ ಸತ್ಯನಾರಾಯಣರಾವ್‌ರವರಿಂದ 'ಆಡಳಿತದಲ್ಲಿ ಮಾನಸಿಕ ಕ್ಲೇಷ: ಪರಿಣಾಮ ಮತ್ತು ಪರಿಹಾರ' ಎಂಬ ವಿಚಾರದಲ್ಲಿ ಭಾಷಣ ಕಾರ್ಯಕ್ರಮ ಜರುಗಿತು. ಆಡಳಿತ ನಿರ್ವಹಣೆಯ ಅರ್ಥವ್ಯಾಪ್ತಿಯನ್ನು ಅಡುಗೆಮನೆಯ ನಿರ್ವಹಣೆಯಿಂದ ಹಿಡಿದು ಉಪಗ್ರಹ ಉಡ್ಡಯನದವರೆಗೆ ಬದುಕಿನ ಎಲ್ಲಾಸ್ತರಗಳಿಗೂ ವಿಸ್ತರಿಸಿದ್ದರಿಂದ ವಿಷಯ ಸಾಧಾರಣೀಕರಣಗೊಂಡಿತ್ತು.

"ಕ್ಲೇಷ" (stress)ವು ನಮ್ಮ ಆಲೋಚನೆಯಲ್ಲಿಯೇ ಇರುತ್ತದೆ; ವಸ್ತುವಿನಲ್ಲಿ, ವಾಸ್ತವದಲ್ಲಿ ಇರುವುದಿಲ್ಲ. ಕ್ಲೇಶ ಆಲೋಚನೆಯ ಅನಿವಾರ್ಯ ಅಂಗ. ಸನ್ನಿವೇಶವನ್ನೋ, ವಿಷಯಗಳನ್ನೋ ಸಾಕ್ಷಿಯಾಗಿ ಮಾತ್ರ ನೋಡುವುದರಿಂದ, ಅದರ ಕುರಿತು 'ನಾನು' ಎಂಬ ಭಾವದ ಸಂಯೋಗವಾಗದೆ ಇದ್ದಾಗ ಕ್ಲೇಶ ಉಂಟಾಗುವುದಿಲ್ಲ. ಇದು ಅವರ ಭಾಷಣದ ಸಾರ. ಈ ಬಗೆಯ ಚಿಂತನಾ ಕ್ರಮವನ್ನು ಸಮರ್ಥಿಸಲು 'ಜೆನ್ ಬುದ್ಧಿಸಂ'ನ ಒಡಪುಗಳನ್ನು ಉದಾಹರಿಸುತ್ತ ಅಭಿಪ್ರಾಯವನ್ನು ಸಂವಹನಗೊಳಿಸುತ್ತಿದ್ದ ರೀತಿ ಪರಿಣಾಮಕಾರಿಯಾಗಿತ್ತು.

ಇಬ್ಬರು ಬೌದ್ಧ ಸನ್ಯಾಸಿಗಳು ಹೋಗುತ್ತಿರುತ್ತಾರೆ. ದಾರಿಯಲ್ಲಿ ಹೊಳೆ ದಾಟಬೇಕಾಗುತ್ತದೆ. ಇನ್ನೊಂದು ದಡಕ್ಕೆ ಹೋಗಲು ಅಂಜುತ್ತ ನಿಂತ ಚೆಲುವೆಯೊಬ್ಬಳನ್ನು ತರುಣ ಸನ್ಯಾಸಿ ಎತ್ತಿ ಆಚೆ ದಡಕ್ಕೆ ಮುಟ್ಟಿಸುತ್ತಾನೆ. ಆ ಇಬ್ಬರು ಸನ್ಯಾಸಿಗಳು ಊರಿಗೆ ಸೇರಿದ ಮೇಲೆ ಹಿರಿಯ ಸನ್ಯಾಸಿ ಹೇಳುತ್ತಾನೆ. "ನೀನು ಸನ್ಯಾಸಿಯಾಗಿಯೂ ತರುಣಿಯನ್ನು ಎತ್ತಿಕೊಂಡೆಯಲ್ಲ...." ಆಗ ತರುಣ ಸನ್ಯಾಸಿ ಉತ್ತರಿಸುತ್ತಾನೆ–"ನಾನು ಅವಳನ್ನು ಆಚೆ ದಡದಲ್ಲಿಯೇ ಬಿಟ್ಟು ಬಂದೆ. ಆದರೆ ನೀನಿನ್ನೂ ಎತ್ತಿಕೊಂಡೇ ಇರುವೆಯಲ್ಲ...."

ಇದು ನಮ್ಮ ಕ್ಲೇಶದ ಕಾರಣ ತಿಳಿಯುವ ವಿಧಾನ. ಒಂದು ಸಂಗತಿಯ ಬಗ್ಗೆ ಅಲ್ಲಿಯೇ ಮುಕ್ತಾಯಗೊಳಿಸದೆ ಮನಸ್ಸಿನಲ್ಲಿ ಹೇರಿಕೊಂಡು ಕ್ಲೇಷಕ್ಕೆ ಒಳಗಾಗುತ್ತೇವೆ.

ಒಟ್ಟಿನಲ್ಲಿ ಸತ್ಯನಾರಾಯಣರ ಭಾಷಣ ಸ್ತುತ್ಯವಾಗಿತ್ತು. ನಡು ನಡುವೆ ಪ್ರಶ್ನೆಗಳಿಗೆ ಉತ್ತರಿಸುತ್ತಾ ಉಪನ್ಯಾಸ ನೀಡುತ್ತಿದ್ದ ರೀತಿ ಹೃದ್ಯವಾಗಿತ್ತು.

ಹಂದಿ ಸಾಕಾಣಿಕೆ ಕೇಂದ್ರ

(ಒಂದನೇ ಪುಟದಿಂದ)

ಚಿಕ್ಕಮಗಳೂರು-ಕೊಡಗು ಗ್ರಾಮೀಣ ಬ್ಯಾಂಕ್ ಅಧ್ಯಕ್ಷ ಅಚ್ಚುತ ಪೈ ಅಧ್ಯಕ್ಷತೆ ವಹಿಸಿದ್ದರು. ದ್ವಾಕ್ರಾ ಯೋಜನೆ ಅನುಷ್ಠಾನದಲ್ಲಿ ಖ್ಯಾತಿ ಪಡೆದಿರುವ ವಿಶೇಷ ಜಿಲ್ಲಾಧಿಕಾರ ಶ್ರೀಮತಿ ರತ್ನಪ್ರಭಾ ಮುಖ್ಯ ಅತಿಥಿಯಾಗಿದ್ದರು. ಗ್ರಾಮೀಣ ಬ್ಯಾಂಕಿನ ನೆಮ್ಮಾರು ಶಾಖೆ ಈ ಯೋಜನೆಗೆ ಹಣಕಾಸು ಒದಗಿಸಿದೆ.

ಯೋಜನೆಯ ನೇತಾರರು

ಇಂಥ ಒಂದು ಉನ್ನತ ಗುರಿಯುಳ್ಳ ಯೋಜನೆಯನ್ನು ರೂಪಿಸಿ ಕಾರ್ಯಗತಗೊಳಿಸುವಲ್ಲಿ ಶೃಂಗೇರಿ ಕ್ಷೇತ್ರಾಭಿವೃದ್ಧಿ ಅಧಿಕಾರಿ ವೆಂಕಟೇಶ ಪ್ರಸಾದ್ ಮತ್ತು ಅವರ ಸಹೋದ್ಯೋಗಿ ಕಿರಿಯ ಇಂಜಿನಿಯರ್ ರತ್ನಾಕರ್ ಅವರ ಶ್ರಮ ಅಪಾರ ಹಾಗೂ ಸ್ತುತ್ಯರ್ಹ.

• ಸುಮಾರು ಎರಡು ವರ್ಷಕ್ಕೂ ಸ್ವಲ್ಪ ಹೆಚ್ಚು ಕಾಲದಿಂದ ಇಲ್ಲಿ ಕೆಲಸ ನಿರ್ವಹಿಸುತ್ತಿರುವ ವೆಂಕಟೇಶ ಪ್ರಸಾದ್ ತುಂಬಾ ಕಾರ್ಯಶೀಲರು. ಸ್ನಾತಕೋತ್ತರ ಕೃಷಿ ಪದವೀಧರರಾದ ಇವರಿಗೆ ಬಡತನದ ಪೂರ್ಣ ಅರಿವಿದ್ದು, ಬಡವರ ಕೆಲಸಗಳನ್ನು ತಡಮಾಡದೆ ಮಾಡಿಸಿಕೊಡುವ ಇವರು ತಾಲ್ಲೂಕಿನ ಎಲ್ಲರಿಗೂ ಅಚ್ಚುಮೆಚ್ಚಾಗಿದ್ದಾರೆ. ಹಿಂದಿನ ಯಾವ ಬೋರ್ಡ್ ಅಥವಾ ಬಿಡಿಒ ಕಾಲದಲ್ಲೂ ಆಗದಿದ್ದಷ್ಟು ಕೆಲಸಗಳು ಇವರ ಕಾಲದಲ್ಲಿ ಆಗಿವೆ.

ಹೊಸ್ಕೆರೆಯ ಈ ಕೇಂದ್ರ ಇವರ ಕಾರ್ಯಶೀಲತೆಗೆ ಹಿಡಿದ ಕನ್ನಡಿಯಾಗಿದೆ. ಯೋಜನೆಯ ಕಾರ್ಯಭಾರವನ್ನು ಹೊತ್ತು, ಹಗಲು ರಾತ್ರಿಯೆನ್ನದೆ ನೋಡಿಕೊಂಡು, ಎಲ್ಲಾ ಸಲಕರಣೆಗಳನ್ನೂ ತಂದು ಅಚ್ಚುಕಟ್ಟಾಗಿ ನಿರ್ಮಿಸುವುದರಿಂದ ಹಿಡಿದು ಬೆಂಗಳೂರಿನಿಂದ ಹಂದಿ ಮರಿಗಳನ್ನು ತರುವಲ್ಲಿಯವರೆಗಿನ ಅವರ ನಿಷ್ಠಾವಂತ ಪ್ರಯತ್ನವನ್ನು ಯಾರು ನೋಡಿದರೂ ಮೆಚ್ಚಬೇಕು.

ಅವರಿಗೆ ಹೆಗಲಿಗೆ ಹೆಗಲಾಗಿ ದುಡಿದ ರತ್ನಾಕರ್‌ರವರ ಆಸ್ಥೆಗೆ ಒಂದು ಉದಾಹರಣೆ: ಚದರ ಅಡಿಗೆ 4ರಿಂದ 5 ರೂ. ಬೀಳುವ ಕಲ್ಲು ಚಪ್ಪಡಿಗಳನ್ನು ತನ್ನ ಸ್ನೇಹಿತರೊಬ್ಬರಿಂದ ತಲಾ 3 ರೂ.ಗೆ ನೆಮ್ಮಾರಿಗೆ ತರಿಸಿ ಫಲಾನುಭವಿಗಳಿಗೆ 9 ಸಾವಿರ ರೂ. ಉಳಿತಾಯ ಮಾಡಿದ್ದಾರೆ. ಫಲಾನುಭವಿಗಳಿಗೆ ಎಲ್ಲ ರೀತಿಯ ಮಾರ್ಗದರ್ಶನ ನೀಡಿ, ಅವರಿಗೆ ಆವರಣ ನಿರ್ಮಾಣ ಕಾರ್ಯದ ಸಂಪೂರ್ಣ ಕೂಲಿ ಸಿಗುವಂತೆ ನೋಡಿಕೊಂಡಿದ್ದಾರೆ.

ಇಂಥ ದಕ್ಷ, ಪ್ರಾಮಾಣಿಕ ಅಧಿಕಾರಿಗಳ ಸೇವೆ ಇನ್ನೂ ಕೆಲವು ಕಾಲ ಈ ತಾಲ್ಲೂಕಿಗೆ ಅಗತ್ಯ.

ಸ್ಥಳೀಯ ದಲಿತರ ಬೇಡಿಕೆಗಳು

ಈ ಕಾರ್ಯಕ್ರಮದ ಸಂದರ್ಭದಲ್ಲಿ ಸಚಿವರಿಗೆ ಮನವಿಯೊಂದನ್ನು ಸಲ್ಲಿಸಿದ ಸ್ಥಳೀಯ ದಲಿತರು ಇಲ್ಲಿಗೆ ಒಂದು ಶಿಶುವಿಹಾರಕ್ಕಾಗಿ ಹಾಗೂ ಪ್ರತಿ ಕುಟುಂಬಕ್ಕೂ ತಲಾ ಎರಡು ಎಕರೆ ಸಾಗುವಳಿ ಯೋಗ್ಯ ಭೂಮಿಯ ಮಂಜೂರಾತಿಗೆ ಮನವಿ ಮಾಡಿದ್ದಾರೆ.

ಕೃತಜ್ಞತೆ

ಕೊಪ್ಪ: ಮಾ. 17ರಿಂದ 30ರ ವರೆಗೆ ನಡೆದ ಕಂದಾಯ ಇಲಾಖೆ ನೌಕರರ ಮುಷ್ಕರದ ಸಂದರ್ಭದಲ್ಲಿ ಸಾರ್ವಜನಿಕರು ಸಹಕರಿಸಿದ್ದಕ್ಕೆ ಕೃತಜ್ಞತೆ ಸಲ್ಲಿಸಿರುವ ನೌಕರರ ಸಂಘ, ಈ ಸಂದರ್ಭದಲ್ಲಿ ಸಾರ್ವಜನಿಕರ ಕೆಲಸ ಕಾರ್ಯಗಳಿಗಾದ ತೊಂದರೆಗಾಗಿ ವಿಷಾದ ವ್ಯಕ್ತಪಡಿಸಿದೆ.

ಸ್ಥಿರಾಸ್ತಿ ಖಾತೆ: ತಕರಾರಿದ್ದಲ್ಲಿ ಸಲ್ಲಿಸಿ

ಕೊಪ್ಪ: ಹರಿಹರಪುರ ಹೋಬಳಿ ಬಿಲಗದ್ದೆ ಗ್ರಾಮದ ಸ. ನಂ. 110ರಲ್ಲಿ 3-10 ಎಕರೆ ಸ್ಥಿರಾಸ್ತಿಯನ್ನು ಕೆಳಕೊಪ್ಪ ವಾಸಿ ಚಿನ್ನಯ್ಯ ಬಿನ್ ತಮ್ಮಯ್ಯ ಇವರು ತಮ್ಮಯ್ಯನವರ ಪೌತಿ ಸಬೂಬು ಖಾತೆ ಮಾಡಿಕೊಡಲು ಕೋರಿದ್ದು, ಈ ಬಗ್ಗೆ ಯಾರದಾದರೂ ತಕರಾರಿದ್ದಲ್ಲಿ 15 ದಿನದೊಳಗೆ ಕೊಪ್ಪ ತಹಸೀಲ್ದಾರ್ ಕಚೇರಿಗೆ ಹಾಜರಾಗಿ ಹೇಳಿಕೆ ನೀಡುವಂತೆ ತಹಸೀಲ್ದಾರ್ ಪ್ರಕಟಣೆ ತಿಳಿಸಿದೆ.

ಉತ್ತಮೇಶ್ವರ ಆಸ್ಪತ್ರೆಯಲ್ಲಿ ಆರೋಗ್ಯ ಕಾರ್ಯಕರ್ತೆಯರ ಕೊರತೆಯಿಂದ ತೊಂದರೆ

ಉತ್ತಮೇಶ್ವರ: ಇಲ್ಲಿನ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಹಲವು ತಿಂಗಳಿಂದ ಆರೋಗ್ಯ ಕಾರ್ಯಕರ್ತೆಯರಿಲ್ಲದೆ ಬಹಳ ತೊಂದರೆಯಾಗುತ್ತಿರುವುದಾಗಿ ತಿಳಿದು ಬಂದಿದೆ.

ಇಲ್ಲಿಗೆ ಮಂಜೂರಾಗಿರುವ 3 ಎ. ಎನ್. ಎಂ. ಹುದ್ದೆಗಳಲ್ಲಿ ಒಂದು ಹುದ್ದೆ ಖಾಲಿಯಿದ್ದು, ಒಬ್ಬರು ಹೆರಿಗೆ ರಜೆಯ ಮೇಲೂ ಇನ್ನೊಬ್ಬರು ಸುಮಾರು 2 ತಿಂಗಳಿಂದ ವೈದ್ಯಕೀಯ ರಜೆಯ ಮೇಲೂ ಇದ್ದಾರೆ.

ಫಾರ್ಮಸಿಸ್ಟ್ ಹುದ್ದೆ ಖಾಲಿಯಾಗಿಯೇ ಇದೆ. ಇದ್ದೊಬ್ಬ ಎರಡನೇ ದರ್ಜೆ ಗುಮಾಸ್ತರನ್ನೂ ಬಾಳೆಹೊನ್ನೂರಿಗೆ ಹೆಚ್ಚು ಕಮ್ಮಿ ಖಾಯಂ ಆಗಿಯೇ ಡೆಪ್ಯೂಟ್ ಮಾಡಲಾಗಿದೆ. ಕೇವಲ 3 ಜನ 4 ನೇ ದರ್ಜೆ ನೌಕರರು ಮಾತ್ರ ಇದ್ದಾರೆ. ಈಚೆಗೆ ವೈದ್ಯರು ಸಹ 3ರಿಂದ 13ರವರೆಗೆ ರಜೆಯಲ್ಲಿದ್ದು, ಇಂಥ ಸಂದರ್ಭಗಳಲ್ಲಿ ಆಸ್ಪತ್ರೆಗೆ ಬರುವವರಿಗೆ ಕೆಲವು ಮೂಲಭೂತ ಔಷಧಿಗಳನ್ನು ಸಹ ನೀಡುವವರು ಇಲ್ಲವಾಗುತ್ತಿದೆ.

ಇಲ್ಲಿ ಏ. 17ಕ್ಕೆ ಕುಟುಂಬ ಯೋಜನೆ ಶಿಬಿರ ಬೇರೆ ನಿಗದಿಯಾಗಿದೆ.

ಸಮಸ್ಯೆಗಳಿಂದ ಪ್ರಗತಿಯತ್ತ ಅಂಗನವಾಡಿ

ಕೊಪ್ಪ: ಈ ತಾಲ್ಲೂಕಿನಲ್ಲಿ ಸುಮಾರು 2 ವರ್ಷಗಳ ಹಿಂದೆ (ಅಂಗನವಾಡಿ ಕಾರ್ಯಕ್ರಮದ ಆರಂಭದ ದಿನಗಳಲ್ಲಿ) 'ಬಲಹೀನ' ಮತ್ತು 'ಅತಿ ಬಲಹೀನ' (3 ಮತ್ತು 4 ನೇ ಗ್ರೇಡ್) ಎಂದು ಗುರುತಿಸಲಾಗಿದ್ದ 294 ಮಕ್ಕಳು ದಾಖಲಾಗಿದ್ದು, ಈಗ ಈ ಸಂಖ್ಯೆ ಕೇವಲ 19ಕ್ಕೆ ಇಳಿದಿದೆಯೆಂದು ಬಾಲ ವಿಕಾಸ ಯೋಜನಾಧಿಕಾರಿ ಕೆ.ಟಿ. ಬೋರಯ್ಯ ತಿಳಿಸಿದ್ದಾರೆ.

ಅಂಗನವಾಡಿ ಯೋಜನೆಯ ಪ್ರಗತಿ ಮತ್ತು ಯೋಜನೆ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸ್ಥೂಲವಾಗಿ 'ಮುಂಜಾವು' ಜೊತೆ ಮಾತನಾಡುತ್ತಿದ್ದ ಅವರು, ಆರಂಭದಲ್ಲಿ ಹಲವಷ್ಟು ವಿಚಾರಗಳಲ್ಲಿ ಬಹಳ ಸಮಸ್ಯೆಗಳನ್ನು ಎದುರಿಸಿದರೂ ಈಗ ಯೋಜನೆಯ ಪ್ರಗತಿ ಹಾಗೂ ಈ ಬಗ್ಗೆ ಸಾಮಾನ್ಯ ಜನತೆಯ ಆಸಕ್ತಿ ಸಾಕಷ್ಟು ಉತ್ತೇಜಕವಾಗಿವೆ ಎಂದರು.

ಅಂಗನವಾಡಿ ಯೋಜನೆಯಲ್ಲಿ ಗರ್ಭಿಣಿ ಸ್ತ್ರೀಯರ ಮತ್ತು ಬಾಣಂತಿಯರ ಆರೈಕೆ 6 ವರ್ಷಕ್ಕಿಂತ ಕಡಿಮೆ ಇರುವ ಮಕ್ಕಳ ಶುಶ್ರೂಷೆ, ಮಕ್ಕಳಿಗೆ ಶಾಲಾ ಪೂರ್ವ ಶಿಕ್ಷಣ, ಪೌಷ್ಟಿಕ ಆಹಾರ, ತುರ್ತು ಔಷಧೋಪಚಾರ ಮತ್ತು ನಿಯಮಿತವಾಗಿ ತಜ್ಞ ವೈದ್ಯರಿಂದ ತಪಾಸಣೆ ಮತ್ತು ಮಾಹಿತಿಗಳ ದಾಖಲೆ, ಕುಟುಂಬ ಕಲ್ಯಾಣ ಕಾರ್ಯಕ್ರಮದ ಬಗ್ಗೆ ಪ್ರಚಾರ ಮತ್ತು ನೆರವು ಮುಂತಾದ ಹಲವು ಬಗೆಯ ಕೆಲಸಗಳು ಒಳಗೊಂಡಿವೆ.

ಈಗ ಸರ್ವೆ ಮಾಡಿರುವಂತೆ ತಾ॥ನಲ್ಲಿ ಮೇಲ್ಕಂಡ ಪ್ರಯೋಜನಕ್ಕೆ ಅರ್ಹರಾದವರ ಸಂಖ್ಯೆ 7284 ಇದ್ದು, 4373 ಜನ ಮಾತ್ರ ಪ್ರಯೋಜನ ಪಡೆಯುತ್ತಿದ್ದಾರೆ, ಉಳಿದವರು ಅಂಗನವಾಡಿ ಕೇಂದ್ರಕ್ಕಿರುವ ದೂರ, ತಿಳುವಳಿಕೆಯ ಕೊರತೆ ಮುಂತಾದ ಕಾರಣಗಳಿಂದಾಗ ಇನ್ನೂ ದೂರ ಉಳಿದಿದ್ದಾರೆ ಎಂದು ಅವರು ಹೇಳಿದರು.

ಗರ್ಭಿಣಿ ಸ್ತ್ರೀಯರಿಗೆ, ಬಾಣಂತಿಯರಿಗೆ ಮತ್ತು ಬಲಹೀನ ಮಕ್ಕಳಿಗೆ ಕೊಡುತ್ತಿದ್ದ ಪೌಷ್ಟಿಕ ಆಹಾರದ ಪ್ರಮಾಣವನ್ನು ಏ. 1ರಿಂದ 25 ಪೈ.ಯಿಂದ 50 ಪೈ.ಗೆ ಹೆಚ್ಚಿಸಲಾಗಿದೆ. ಈಗ ಆಹಾರ ಪದಾರ್ಥಗಳನ್ನು ಆಯಾ ಕೇಂದ್ರಗಳಿಗೇ ತಲುಪಿಸುವ ವ್ಯವಸ್ಥೆ ಮಾಡಲಾಗಿದೆ ಎಂದ ಅವರು, ಅರ್ಹರಾದ ಜನತೆ ಈ ಯೋಜನೆಯ ಪ್ರಯೋಜನವನ್ನು ಹೆಚ್ಚು ಹೆಚ್ಚು ಪಡೆಯುವಂತೆ ಎಲ್ಲರೂ ಸಹಕರಿಸಲು ಮನವಿ ಮಾಡಿದ್ದಾರೆ.

ಕೊಪ್ಪದ ವಿದ್ಯುಚ್ಛಕ್ತಿ ಇಲಾಖೆ ಕಚೇರಿಯ ಕೆಲಸದ ವೇಳೆ ಬದಲಾವಣೆಗೆ ಆಗ್ರಹ

ಕೊಪ್ಪ: ಇಲ್ಲಿನ ಬಾಳಗಡಿಯಲ್ಲಿರುವ ವಿದ್ಯುಚ್ಛಕ್ತಿ ಇಲಾಖೆ ಕಚೇರಿಯ ಕೆಲಸದ ವೇಳೆಯನ್ನು ಬದಲಿಸಬೇಕೆಂಬ ಒತ್ತಾಯವೊಂದು ಕೇಳಿಬರುತ್ತಿದೆ.

ಬೆಳಗಿನ 8-30ರಿಂದ 12, ಮಧ್ಯಾಹ್ನ 2-30ರಿಂದ 5-30ರವರೆಗೆ ಕಚೇರಿ ವೇಳೆಯಿದ್ದು, ಇಲ್ಲಿನ ಕ್ಯಾಶ್ ಕೌಂಟರ್ 11.30 ಮತ್ತು 4.30ಕ್ಕೆ ಮುಚ್ಚುತ್ತದೆ. ಇದರಿಂದ ಮುಖ್ಯವಾಗಿ ಹಳ್ಳಿಗರಿಗೆ ಬಹಳ ತೊಂದರೆಯಾಗುತ್ತಿದೆಯೆನ್ನಲಾಗಿದೆ.

ಇಲ್ಲಿನ ಕಚೇರಿ ಇನ್ನೂ 'ಸೆಕ್ಷನ್' ಎಂದೇ ಪರಿಗಣಿತವಾಗಿದ್ದು, ಹಿಂದೆ ಸೆಕ್ಷನ್ ಆಫೀಸರ್‌ಗಳೇ ಕ್ಯಾಶ್ ಆಫೀಸರ್‌ಗಳಾಗಿದ್ದ ಕಾಲದಲ್ಲಿ ಇಂಥ ವೇಳಾ ಪಟ್ಟಿ ಇತ್ತೆನ್ನಲಾಗಿದೆ. ಆದರೆ ಈಗ ಪ್ರತ್ಯೇಕ ಅಕೌಂಟ್ಸ್ ವಿಭಾಗವೇ ಇದ್ದು, ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಮೇಲ್ವಿಚಾರಕ ಅಧಿಕಾರಿಯಾಗಿದ್ದರೂ ಇನ್ನೂ ಇದನ್ನು ಉಪವಿಭಾಗದ ದರ್ಜೆಗೆ ಏರಿಸಿಲ್ಲ. 1981ರ ಸರ್ಕಾರಿ ಆದೇಶದಂತೆ ಉಪವಿಭಾಗವೊಂದು ತಾ॥ ಕೇಂದ್ರದಲ್ಲೇ ಇರಬೇಕೆಂದಿದ್ದರೂ ಹೋಬಳಿ ಕೇಂದ್ರವಾದ ಬಾಳೆಹೊನ್ನೂರು ಇಲ್ಲಿನ 3 ತಾ॥ಗಳಿಗೆ ಉಪ ವಿಭಾಗ ಕೇಂದ್ರವಾಗಿದೆ.

ಈ ನ್ಯೂನತೆಗಳನ್ನು ಸರಿಪಡಿಸಿ, ಇಲ್ಲಿನ ಕೆಲಸದ ವೇಳೆಯನ್ನು ಮಾಮೂಲಿ ಕಚೇರಿ ವೇಳೆಗೆ ಬದಲಿಸಬೇಕೆಂಬ ಈಗಿನ ಒತ್ತಾಯಕ್ಕೆ ಕಚೇರಿ ಸಿಬ್ಬಂದಿ ಕೂಡ ಪೂರ್ಣ ಬೆಂಬಲವಾಗಿದ್ದಾರೆ.

ಬಸ್ತಿಮಠ ದೇವಾಲಯದ ಪುನರ್ನಿರ್ಮಾಣಕ್ಕೆ ಗುದ್ದಲಿ ಪೂಜೆ

ನರಸಿಂಹರಾಜಪುರ: ಇಲ್ಲಿನ ಬಸ್ತಿಮಠದ ಜ್ವಾಲಾಮಾಲಿನಿ ದೇವಾಲಯದ ಪುನರ್ನಿರ್ಮಾಣ ಕಾರ್ಯದ ಗುದ್ದಲಿ ಪೂಜೆಯನ್ನು ಲಕ್ಷ್ಮೀಸೇನ ಸ್ವಾಮೀಜಿಯವರ ನೇತೃತ್ವದಲ್ಲಿ ಏ. 8ರಂದು ಕಾರ್ಗಲ್ಲಿನ ಪಟೇಲ್ ಧುಡ್ಡಪ್ಪ ಗೌಡರು ನೆರವೇರಿಸಿದರು.

ಈ ಕಾರ್ಯಕ್ಕಾಗಿ 12 ಲಕ್ಷ ರೂ.ಗಳ ಯೋಜನೆಯನ್ನು ತಯಾರಿಸಲಾಗಿದ್ದು ಭಕ್ತಾದಿಗಳಿಂದ ಈಗಾಗಲೇ 5 ಲಕ್ಷ ರೂ. ದೇಣಿಗೆಯ ವಾಗ್ದಾನ ದೊರೆತಿದೆ. ಸರ್ಕಾರದಿಂದ ಸಾಧ್ಯವಿರುವ ಎಲ್ಲ ನೆರವಿನ ಭರವಸೆಯನ್ನು ಜಿಲ್ಲಾಧಿಕಾರಿಗಳು ನೀಡಿದ್ದಾರೆ. ಸಂಪೂರ್ಣ ಕಲ್ಲಿನಿಂದ ನಿರ್ಮಾಣವಾಗಲಿರುವ ದೇವಾಲಯದ ಕೆಲಸ ಈಗಾಗಲೇ ಆರಂಭವಾಗಿದೆ.

ಉತ್ಸವಗಳು

ಅಂದಗಾರು

ಇಲ್ಲಿನ ಲಕ್ಷ್ಮೀನಾರಾಯಣ ದೇವಾಲಯದ ರಥೋತ್ಸವ ಏ. 18ರಂದು ಹಾಗೂ ಇತರ ಉತ್ಸವಗಳು ಏ. 17 ರಿಂದ 21ರ ವರೆಗೆ ನಡೆಯುತ್ತವೆ.

ಕೊಪ್ಪ

ಇಲ್ಲಿನ ರಾಮದೇವಸ್ಥಾನದಲ್ಲಿ ವಸಂತ ನವರಾತ್ರಿ ಮಹೋತ್ಸವ ಏ. 10ರಿಂದ 19ರವರೆಗೆ, ಮಹಾ ರಥಾರೋಹಣ ಏ. 18ರಂದು, ಹನುಮೋತ್ಸವ ಏ. 19 ರಂದು ನಡೆಯುತ್ತವೆ.

ಹರಿಹರಪುರ

ಇಲ್ಲಿನ ಮಠಾಧೀಶರಾದ ರಾಮಾನಂದ ಸರಸ್ವತಿಗಳ 66ನೇ ವರ್ಧಂತ್ಯುತ್ಸವದ ಅಂಗವಾಗಿ ಏ. 21ರಂದು ಅಭಿನಂದನಾ ಸಮಾರಂಭ ನಡೆಯುತ್ತದೆ.

ಜಾಹೀರಾತಿಗೆ 'ಮುಂಜಾವು' ಅತ್ಯುತ್ತಮ ಮಾಧ್ಯಮ

ನಿರುದ್ಯೋಗಿಗಳಿಗೊಂದು ಸದವಕಾಶ !!

ಕೇವಲ 4 ತಿಂಗಳಲ್ಲಿ ರೇಡಿಯೋ ಮತ್ತು ಟ್ರಾನ್ಸಿಸ್ಟರ್ ರಿಪೇರಿ ಕಲಿಸಲಾಗುವುದು. ಪಾರ್ಟ್ ಟೈಂ ತರಗತಿಗೆ 6 ತಿಂಗಳು. ಪರವೂರಿನವರಿಗೆ ರೂಮು ಮತ್ತು ಮೆಸ್ ಸೌಕರ್ಯ ಉಂಟು. ವಿಚಾರಿಸಿ: **ಕರ್ನಾಟಕ ಕೈಗಾರಿಕೆ ಶಿಕ್ಷಣ ಸಂಸ್ಥೆ**, ಬಸ್ ಸ್ಟ್ಯಾಂಡ್ ಸಮೀಪ, ಕೊಪ್ಪ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಶಿರಿಮನೆ ನಾಗರಾಜ್, ಅಚ್ಚು: ದೀವಟಿಗೆ ಅಚ್ಚು ಕೂಟ, ಕೊಪ್ಪ.